ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
**ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ**
ESTD-1964 **(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)**
**ಊಟಿ ರಸ್ತೆ, ಮೈಸೂರು - 570 025**

☎: ೦೮೨೧-೨೫೪೮೨೩೬ & ೨೫೪೮೩೮೦ **Fax:** ೦೮೨೧-೨೫೪೮೨೩೮ **E-mail:** jssautonomous@gmail.com **www.jsscacs.edu.in**

**ಸಂಖ್ಯೆ :** **ದಿನಾಂಕ : 15.03.2018**

**"ವಚನಗಳು ಪ್ರಖರ ಸತ್ಯದ ಚಿಂತನೆಗಳಾಗಿವೆ"**

**– ಡಾ. ಕೃಷ್ಣಮೂರ್ತಿ ಹನೂರು**

ದಿನಾಂಕ ೧೫.೦೩.೨೦೧೮ ರಂದು ನಗರದ ಬಿ.ಎನ್. ರಸ್ತೆಯ ಜೆ ಎಸ್ ಎಸ್ ಕಾಲೇಜಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಹಾಗೂ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದ ಜಾಣ–ಜಾಣೆಯರ ಬಳಗದ ವತಿಯಿಂದ 'ಸಾಹಿತಿಯೊಂದಿಗೆ ಸಂವಾದ' ಕಾರ್ಯಕ್ರಮವನ್ನು ಪ್ರೊ. ಕೃಷ್ಣಮೂರ್ತಿ ಹನೂರು ಅವರೊಂದಿಗೆ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ.ಬಿ.ವಿ. ಸಾಂಬಶಿವಯ್ಯನವರು, ಗಿಡಕ್ಕೆ ನೀರೆರೆಯುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಸಂವಾದವು ನಮ್ಮ ಸಂವಹನ ಕೌಶಲವನ್ನು ಅಭಿವೃದ್ಧಿಗೊಳಿಸುತ್ತದೆ, ಅದು ಬದುಕಿನ ಅರಿವನ್ನು ವಿಸ್ತರಿಸಿಕೊಳ್ಳುವಲ್ಲಿ ಉತ್ತಮ ಮಾರ್ಗವಾಗಿದೆ, ಸಾಹಿತಿಗಳೊಂದಿಗಿನ ಸಂವಾದವು ನಮ್ಮ ಜೀವನದ ಮೌಲಿಕ ಆಯಾಮಗಳನ್ನು ವಿಸ್ತರಿಸುತ್ತದೆಂದು ತಿಳಿಸಿದರು.

ಪ್ರೊ. ಕೃಷ್ಣಮೂರ್ತಿ ಹನೂರು ಅವರು ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಉತ್ತರಿಸುತ್ತಾ ನಾವು ನಮ್ಮ ಇತಿಹಾಸವನ್ನು ನೋಡುತ್ತಿರುವ ಕ್ರಮ ಬದಲಾಗಬೇಕಿದೆ, ರಮ್ಯ, ರೋಮಾಂಚನದ, ಉತ್ಪ್ರೇಕ್ಷಿತ ಕಥನ ತಂತ್ರಗಳು ಅಲ್ಲಿವೆ, ಹಾಗಾಗಿ ವಾಸ್ತವತೆ ತಿಳಿಯಲಾಗುತ್ತಿಲ್ಲ, ಇದರಿಂದಾಗಿ ವಸ್ತುಸ್ಥಿತಿಯನ್ನು ಆಲೋಚಿಸುವ ಸಾಮರ್ಥ್ಯ ಕಳೆದುಕೊಂಡಿದ್ದೇವೆ. ಇತಿಹಾಸವೆಂದರೆ ಅದೊಂದು ಸಂಸ್ಕೃತಿ, ಆ ಕಾಲದಲ್ಲಿ ಬದುಕಿದ ಜನಮಾನದ ಮಾನಸ ವ್ಯವಸ್ಥೆಗಳ ಅಧ್ಯಾಯ. ಹಾಗಾಗಿ ಅದೊಂದು ಮಾನವಶಾಸ್ತ್ರವೂ ಆಗಿದೆ. ಶ್ರೇಷ್ಠ ಸಾಹಿತ್ಯ ಕೃತಿಗಳಲ್ಲಿನ ಇತಿಹಾಸ ಇಂತಹ ಸಂಸ್ಕೃತಿ ಮತ್ತು ಮಾನವನ ಮನೋವ್ಯಾಪಾರಗಳನ್ನು ಒಳಗೊಂಡು ರೂಪುಗೊಂಡಿರುತ್ತದೆ. ಈ ನಿಟ್ಟಿನಲ್ಲಿ ಜನಪದರ ರಚನೆಗಳು ಹೆಚ್ಚು ವಾಸ್ತವ ಸಂಗತಿಗಳಿಗೆ ಹತ್ತಿರವಾಗಿರುತ್ತವೆ ಎಂದು ತಿಳಿಸಿದರು. ಆಧುನಿಕತೆಯ ಅಣುಕಿಸುವಿಕೆಯಿಂದಾಗಿ ನಮ್ಮ ಗ್ರಾಮೀಣ ಸಂಸ್ಕೃತಿ ತನ್ನ ನೆಲೆಯನ್ನು ಕಳೆದುಕೊಳ್ಳುತ್ತಿರುವುದು ಅತ್ಯಂತ ಅಪಾಯಕಾರಿ, ಇಂದಿನ ಎಲ್ಲ ಅಸಮಾನತೆಗಳ ನಿವಾರಣೆಗಳಿಗೆ ನಮ್ಮ ನಮ್ಮ ಅಂತರಂಗ ವಿಕಾಸವೇ ದಾರಿಯಾಗಬಲ್ಲದೆಂದು ಸೂಚಿಸುತ್ತಾ ಇದಕ್ಕೆ ವಚನಕಾರರ ರಚನೆಗಳನ್ನು ನಿದರ್ಶನವಾಗಿ ನೀಡುತ್ತಾ ಅಲ್ಲಿ ರಾಜಕಾರಣದ ಸೋಂಕೇ ಇಲ್ಲದ, ಪ್ರಖರ ಸತ್ಯದ ಚಿಂತನೆಗಳಿವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪ್ರಜಾವಾಣಿ ಬಳಗ ಹೊರತಂದಿರುವ 'ಸುಧಾ' ಯುಗಾದಿ ವಿಶೇಷಾಂಕವನ್ನು ಬಿಡುಗಡೆ ಮಾಡಲಾಯಿತು. ಸಮಾರಂಭದಲ್ಲಿ ಪ್ರಜಾವಾಣಿ ಬಳಗದ ಪದಾಧಿಕಾರಿಗಳು ಸಹ ಹಾಜರಿದ್ದರು. ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಪ್ರೊ. ಡಿ.ಎಸ್. ಸದಾಶಿವಮೂರ್ತಿಯವರು, ಅಧ್ಯಾಪಕರುಗಳು ಉಪಸ್ಥಿತರಿದ್ದರು. ವಿನಯಕುಮಾರ್. ಎಚ್.ಸಿ ಪ್ರಾರ್ಥಿಸಿದರು, ಕನ್ನಡ ಸ್ನಾತಕೋತ್ತರ ವಿಭಾಗದ ಸಂಯೋಜಕರಾದ ಡಾ. ಎಚ್. ಟಿ. ಶೈಲಜರವರು ಸ್ವಾಗತ ಮತ್ತು ಪ್ರಾಸ್ತಾವಿಕ ಮಾತುಗಳನ್ನಾಡಿದರು, ಕು ಆಶಾ.ಎಂ. ವಂದಿಸಿದರು, ಕು. ಪವಿತ್ರ. ಕೆ.ಎಸ್. ಕಾರ್ಯಕ್ರಮ ನಿರೂಪಿಸಿದರು.

ಪ್ರಾಂಶುಪಾಲರು

ಗೆ,
ಸಂಪಾದಕರು
______________
______________